# ಹೊಸತು

## ಶಿನೊ ಷರಾಯಿ




ಅಮೆರಿಕನ್ ಸ್ವಾನ್ ಕಂಪೆನಿ ಶಿನೊ ಷರಾಯಿ ಉಡುಗೆಗಳನ್ನು ಬಿಡುಗಡೆ ಮಾಡಿದೆ. ಮೊದಲು ಬೇಸಿಗೆ ಕಾಲಕ್ಕೆ ಮಾತ್ರ ಸೂಕ್ತ ಎನಿಸಿದ್ದ ಈ ಉಡುಗೆಯನ್ನು ಇದೀಗ ಎಲ್ಲ ಕಾಲಕ್ಕೂ ಸೂಕ್ತವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಶಿನೊ ಪಾಪ್‌ನಿಂದ ಪೇಸ್ಟಲ್ಸ್‌ವರೆಗೆ, ನಿಯಾನ್‌ನಿಂದ ನ್ಯೂಡ್ಸ್‌ವರೆಗಿನ ಶೈಲಿಯಲ್ಲಿ ಸಿಗುತ್ತದೆ. ಕ್ಯಾಷುವಲ್ ಶಿನೊ ಜತೆಗೆ ಆಕರ್ಷಕ ಟಿ ಶರ್ಟ್ ಕೂಡ ಲಭ್ಯ. ಪಾರ್ಟಿ ವೇರ್‌ಗೆ ಸೂಕ್ತವಾಗಿದೆ. ಪ್ರಿಂಟೆಡ್ ಟಾಪ್‌ಗಳು ಹೊಸ ಟ್ರೆಂಡ್ ಆಗಿರುವ ಈ ಕಾಲದಲ್ಲಿ ಶಿನೊ ಆಧುನಿಕ ಮನೋಭಾವದವರ ಆಸೆ ಪೂರೈಸುತ್ತಿದೆ.

ಬೆಲೆ ₹ 1019 ರಿಂದ 1259. ವಿವರಕ್ಕೆ: 9650609233



## ಉಷಾದಿಂದ 'ಬ್ರೇಕ್‌ಫಾಸ್ಟ್ ಮೇಕರ್'

ಉಷಾ ಇಂಟರ್‌ನ್ಯಾಷನಲ್ ಇದೀಗ ಬೆಳಗಿನ ತಿನಿಸು ತಯಾರಿಸುವ ಹೊಸ ಮಾದರಿಯ ಅಡುಗೆ ಉಪಕರಣಗಳನ್ನು ಬಿಡುಗಡೆ ಮಾಡಿದೆ.

ಈ ಉತ್ಪನ್ನಗಳು ರುಚಿಕರವಾದ ಅಡುಗೆ ಸುಲಭದಲ್ಲಿ ಮಾಡಲು ಸಹಕಾರಿಯಾಗಿದೆ. ಉಷಾ ಮಿಕ್ಸರ್ ಗ್ರೈಂಡರ್, ಉಷಾ ಪಾಪ್ ಅಪ್ ಟೋಸ್ಟರ್, ಉಷಾ ಕ್ವಿಕ್ ಪಾಟ್, ಉಷಾ ಕಾಫಿ ಮೇಕರ್ ಮತ್ತು ಉಷಾ ಟೀ ಕೆಟಲ್ ಈ ಸೆಟ್‌ನಲ್ಲಿ ಸೇರಿದೆ.

ಉತ್ತಮ ಗುಣಮಟ್ಟ ಹಾಗೂ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿರುವ ಈ ಉಪಕರಣಗಳು ಅತ್ಯಂತ ವೇಗವಾಗಿ ಸ್ವಾದಿಷ್ಟವಾದ ಅಡುಗೆ ಮಾಡಲು ಸಹಕಾರಿಯಾಗಿದೆ.

ಜ್ಯೂಸರ್ ಮಿಕ್ಸರ್ ಗ್ರೈಂಡರ್ ಬೆಲೆ ₹ 3795.

ಪಾಪ್ ಅಪ್ ಟೋಸ್ಟರ್: ಇದು ಎಲೆಕ್ಟ್ರಾನಿಕ್ ವೇರಿಯಬಲ್ ಕಂಟ್ರೋಲ್ ಚಾಲಿತ. ಅಚ್ಚುಕಟ್ಟಾಗಿ ಬ್ರೆಡ್ ಟೋಸ್ಟ್ ಮಾಡಲು ಸಹಕಾರಿ. ಬೆಲೆ ₹ 2795.

ಕ್ವಿಕ್ ಪಾಟ್: ವಿವಿಧ ಬಗೆಯ ನೂಡಲ್ಸ್, ಪ್ಯಾಸ್ತ, ಪೊರಿಜ್, ಸೂಪ್ ಮತ್ತು ಇತರೆ ತರಕಾರಿ ಆಧಾರಿತ ಪೇಯಗಳನ್ನು ಮಾಡಲು ಅನುವು ಮಾಡಿಕೊಡುವ ಕ್ವಿಕ್ ಪಾಟ್, ಬಿಸಿ ನೀರು ಅಥವಾ ಹಾಲನ್ನು ಕಾಯಿಸಲು ಸಹ ಸಹಕಾರಿಯಾಗಲಿದೆ. ಬೆಲೆ ₹ 1895.

ಕಾಫಿ ಮೇಕರ್: ರಿಯಲ್ ಮೆಟಲ್ ಕೂಲ್ ಟಚ್. ಬಿಸಿಯನ್ನು ನಿಗ್ರಹ ಮಾಡುವ ಶಕ್ತಿ. ಅರೋಮಾ ಶಕ್ತಿ ನೀಡುವ ಕಾಫಿ ಮೆಷಿನ್ ಇದಾಗಿರುತ್ತದೆ. ಒಂದೇ ಟಚ್‌ನಲ್ಲಿ ಸುಮಾರು 10 ಕ್ಕೂ ಹೆಚ್ಚು ಕಪ್ ಕಾಫಿ ತಯಾರು ಮಾಡುವ ಶಕ್ತಿ. ಫಿಲ್ಟರ್ ಶುಚಿ ಮಾಡಲು ಸುಲಭ. ಬೆಲೆ ₹ 4995.

ಟೀ ಕೆಟಲ್: ವೇಗವಾಗಿ ಬಿಸಿಯಾಗುತ್ತದೆ. ಬೆಲೆ ₹ 2395.

## ತಲೆಹೊಟ್ಟು ನಿವಾರಕ ಕ್ಲಿಯರ್ ಶಾಂಪು

ತಲೆ ಹೊಟ್ಟು ಸೇರಿದಂತೆ ಕೂದಲಿನ ಎಲ್ಲ ಸಮಸ್ಯೆಗಳಿಗೆ ಮುಕ್ತಿ ಪಡೆಯಲು ನ್ಯೂಟ್ರಿಯಂ ತೈಲದ ಮಿಶ್ರಣವಿರುವ ನ್ಯೂ ಕ್ಲಿಯರ್ ಶಾಂಪು ಮಾರುಕಟ್ಟೆಗೆ ಬಂದಿದೆ.

ಇದರಲ್ಲಿ ವಿಟಮಿನ್, ಖನಿಜಾಂಶ, ಸೂರ್ಯಕಾಂತಿ ತೈಲದ ಮಿಶ್ರಣವಿದ್ದು, ಇದು ಕೂದಲ ಬುಡದಿಂದಲೇ ಆರೈಕೆ ಮಾಡುತ್ತದೆ. ಇದರಿಂದ ತಲೆಹೊಟ್ಟು ನಿವಾರಣೆಯಾಗಿ, ನೈಸರ್ಗಿಕವಾಗಿ ಕೂದಲ ಆರೋಗ್ಯ ಕಾಪಾಡುತ್ತದೆ ಎನ್ನುವುದು ಕಂಪೆನಿ ವಿವರಣೆ. ಈ ಶಾಂಪುವಿನಲ್ಲಿ ಮೂರು ವೈವಿಧ್ಯಗಳಿವೆ. 90 ಎಂಎಲ್‌ಗೆ ₹ 62.

ವಿವರಕ್ಕೆ: 9820907707




## ಪ್ರೊವೇದ ಹರ್ಬಲ್ ಬಾಡಿಕೇರ್ ಜೆಲ್

ತ್ವಚೆಯ ವಿಶೇಷ ರಕ್ಷಣೆಗಾಗಿ ಪ್ರೊವೇದ ಹರ್ಬಲ್ಸ್ ಬಾಡಿಕೇರ್ ಜೆಲ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಬೆವರಿನ ಕಿರಿಕಿರಿಗೆ ಮುಕ್ತಿ ನೀಡುತ್ತದೆ. ಮೊಡವೆ, ಬ್ಲ್ಯಾಕ್‌ಹೆಡ್ಸ್ ಮುಂತಾದ ಸಮಸ್ಯೆ ನೀಗಿಸುತ್ತದೆ. ತ್ವಚೆಯೊಳಗೆ ಕೊಳೆ, ಧೂಳು ಸೇರುವುದನ್ನು ತಡೆಗಟ್ಟುತ್ತದೆ.

ಸಾಂಬಾರ ಪದಾರ್ಥಗಳಾದ ಲವಂಗ, ದಾಲ್ಚಿನ್ನಿ ಬಳಸಿ ತಯಾರಿಸಲಾಗಿದೆ. ಚರ್ಮದ ನಯಕ್ಕೆ, ಹೊಳಪಿಗೆ ಸಹಕಾರಿ ಮತ್ತು ತ್ವಚೆಯ ಆರೋಗ್ಯಕ್ಕೂ ಒಳ್ಳೆಯದು ಎನ್ನುವುದು ಕಂಪೆನಿ ವಿವರಣೆ.

100 ಎಂಎಲ್ ಪ್ಯಾಕ್ ಬೆಲೆ ₹ 170. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

